ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ ದಿನಾಂಕ : DATE : 25/07/2019

ಅಧಿಕಾರ ಗ್ರಹಣದ ಧಾವಂತಕ್ಕೆ ಹೈಕಮಾಂಡ್ ಬ್ರೇಕ್ | ಶಾಸಕರಿಗೆ ರೆಸಾರ್ಟ್ ಕಾಯಂ

## ಅತೃಪ್ತರ ರಾಜೀನಾಮೆ ಇತ್ಯರ್ಥವಾಗದೆ ಮ್ಯಾಜಿಕ್ ನಂಬರ್‌ಗೆ ತಾಂತ್ರಿಕ ತೊಡಕು

# ಕಾದು ಕುಳಿತ ಬಿಎಸ್‌ವೈ

ವಿಕ ಸುದ್ದಿಲೋಕ ಬೆಂಗಳೂರು

ಮೈತ್ರಿ ಸರಕಾರ ಪತನದ ಬೆನ್ನಲ್ಲೇ ಬಿಜೆಪಿ ಪಾಳಯದಲ್ಲಿ ಬಿರುಸುಗೊಂಡಿದ್ದ ಅಧಿಕಾರ ಹಿಡಿಯುವ ಚಟುವಟಿಕೆಗೆ ಹೈಕಮಾಂಡ್ ಲಗಾಮು ಹಾಕಿದೆ. ಸರಕಾರ ರಚನೆಗೆ ಹಕ್ಕು ಮಂಡಿಸುವ ಉತ್ಸಾಹದಲ್ಲಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಯಡಿಯೂರಪ್ಪ ಅವರು ವರಿಷ್ಠರ ಸಂದೇಶಕ್ಕಾಗಿ 'ಕಾದು' ಕುಳಿತಿದ್ದಾರೆ. ಬಂಡಾಯ ಶಾಸಕರ ಅನರ್ಹತೆ ಪ್ರಶ್ನೆ, ಸುಪ್ರೀಂಕೋರ್ಟ್ ಮುಂದಿರುವ ವಿಚಾರಣೆ, ಮ್ಯಾಜಿಕ್ ನಂಬರ್ ಇತ್ಯಾದಿ ತಾಂತ್ರಿಕ ಸಂಗತಿಗಳು ಸ್ಪಷ್ಟಗೊಂಡ ಬಳಿಕವೇ ಮುಂದಡಿ ಇಡಲು ಬಿಜೆಪಿ ವರಿಷ್ಠರು ನಿರ್ಧರಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಯಡಿಯೂರಪ್ಪ ನಿವಾಸದಲ್ಲಿ ಬುಧವಾರ ಬೆಳಗ್ಗೆಯಿಂದಲೂ ಸರಣಿ ಸಭೆಗಳು ನಡೆದಿವೆ. ರಾಜ್ಯ ಉಸ್ತುವಾರಿ ಪಿ. ಮುರಳೀಧರ್ ರಾವ್, ಮಾಜಿ ಸಿಎಂ ಜಗದೀಶ್ ಶೆಟ್ಟರ್, ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ, ಆರ್.ಅಶೋಕ್, ಬಸವರಾಜ ಬೊಮ್ಮಾಯಿ, ಮಾಧುಸ್ವಾಮಿ ಮೊದಲಾದವರು ಈ ಸಭೆಯಲ್ಲಿ ಉಪಸ್ಥಿತರಿದ್ದರು. ಅತೃಪ್ತ ಶಾಸಕರ ರಾಜೀನಾಮೆ ಸ್ವೀಕಾರ ಅಥವಾ ಅನರ್ಹತೆ ವಿಚಾರ ಬಾಕಿ ಇರುವುದರಿಂದ ತಾಂತ್ರಿಕವಾಗಿ ಬಹುಮತಕ್ಕೆ ತೊಂದರೆ ಎದುರಾಗಬಹುದೇ ಎಂಬ ಪ್ರಶ್ನೆ ಬಿಜೆಪಿಯನ್ನು ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಸುದೀರ್ಘ ಚರ್ಚೆ ನಡೆದಿದೆ. ಹಾಗಾಗಿ ಬಿಜೆಪಿ ನಿಯೋಗ ಸ್ಪೀಕರ್‌ರನ್ನು ಭೇಟಿ ಮಾಡಿ ಶಾಸಕರ ರಾಜೀನಾಮೆಯನ್ನು ಆದಷ್ಟು ಬೇಗ ಅಂಗೀಕರಿಸುವಂತೆ ಮನವಿ ಮಾಡಿತು.





ಬಿಜೆಪಿ ರಾಷ್ಟ್ರೀಯ ಪಕ್ಷ. ಇಲ್ಲಿ ಪ್ರತಿಯೊಂದಕ್ಕೂ ನಿಯಮ, ಸಂಪ್ರದಾಯವಿದೆ. ಶಾಸಕಾಂಗ ಪಕ್ಷದ ಸಭೆ ನಡೆಸಲು ರಾಷ್ಟ್ರೀಯ ಅಧ್ಯಕ್ಷರು ಅನುಮತಿ ನೀಡಿದ ಬಳಿಕವೇ ಮುಂದಿನ ಪ್ರಕ್ರಿಯೆ ನಡೆಯುತ್ತದೆ.

-ಜೆ.ಸಿ.ಮಾಧುಸ್ವಾಮಿ ಬಿಜೆಪಿ ಶಾಸಕ

### ಬಿಜೆಪಿಗೂ ಅತೃಪ್ತರದೇ ಸಂಕಟ!

ಬಿಎಸ್‌ವೈ ಸಿಎಂ ಪದಗ್ರಹಣಕ್ಕೆ ಮ್ಯಾಜಿಕ್ ನಂಬರ್ ಸಮಸ್ಯೆಯಾಗಿದೆ. ಅತೃಪ್ತ ಶಾಸಕರ ರಾಜೀನಾಮೆ ಅಂಗೀಕಾರವಾಗದಿರುವುದು ಇದಕ್ಕೆ ಕಾರಣ. ಅಸೆಂಬ್ಲಿಯ ಒಟ್ಟು ಬಲ 224. ಅತೃಪ್ತರ ರಾಜೀನಾಮೆ ಇತ್ಯರ್ಥವಾಗದಿರುವುದರಿಂದ ಸದನದ ಒಟ್ಟು ಬಲ ಇನ್ನೂ ಅಷ್ಟೇ ಇದೆ. ಹೀಗಾಗಿ, ಮ್ಯಾಜಿಕ್ ನಂಬರ್ 113. ಆದರೆ ಬಿಜೆಪಿ ಬಳಿ ಪಕ್ಷೇತರರು ಸೇರಿ 107 ಸದಸ್ಯ ಬಲ ಮಾತ್ರವಿದೆ. ಹೀಗಾಗಿ ಈ ತಾಂತ್ರಿಕ ವಿಚಾರಗಳು ಬಗೆಹರಿಯುವವರೆಗೆ ಯಾವುದೇ ಸಂಕಷ್ಟವನ್ನು ಮೈಮೇಲೆ ಎಳೆದುಕೊಳ್ಳುವುದು ಬೇಡ ಎಂಬುದು ವರಿಷ್ಠರ ನಿಲುವು.

- ರಾಜೀನಾಮೆ ಇತ್ಯರ್ಥವಾದರೆ ಮಾತ್ರ ಈಗಿನ ಬಲ(107)ದಿಂದ ಬಹುಮತ ಸಾಬೀತು ಸಾಧ್ಯ.
- ಅತೃಪ್ತರಿನ್ನೂ ಕಾಂಗ್ರೆಸ್ ಬಿಟ್ಟಿಲ್ಲ, ಬೇರೇನಾದರೂ ತಿರುವು ಸಿಕ್ಕರೆ ಸಮಸ್ಯೆ.
- ಬಿಜೆಪಿ ಸೇರುವ ಅತೃಪ್ತರ ಸ್ಥಾನಮಾನ ಚರ್ಚೆ ಆಗಿಲ್ಲ.
- ನಿಷ್ಠಾವಂತರನ್ನು ಬಿಟ್ಟು ಅತೃಪ್ತರಿಗೇ ಮಣೆ ಹಾಕಿದರೆ ಅಪಾಯ.

- ಅತೃಪ್ತ ಶಾಸಕರ ಅನರ್ಹತೆಗೆ ಬಿಗಿ ಪಟ್ಟು ಹಿಡಿದ ಕಾಂಗ್ರೆಸ್
- ದೋಸ್ತಿ ಮುಂದುವರಿಕೆಗೆ ಕಾಂಗ್ರೆಸ್‌ನಲ್ಲಿ ಒಮ್ಮತವಿಲ್ಲ
- ಕಾಂಗ್ರೆಸ್ ನಿರ್ಧಾರ ನೋಡಿ ಹೆಜ್ಜೆ ಇಡಲಿರುವ ಜೆಡಿಎಸ್
- ಪ್ರತಿಪಕ್ಷ ನಾಯಕ ಹುದ್ದೆ: ಸಿದ್ದುಗೆ ಸಲೀಸಲ್ಲ, ಡಿಕೆಶಿ, ಪರಮೇಶ್ವರ್ ಪ್ರಯತ್ನ
- ಊರಿಗೆ ಮರಳಿದ ರೆಬೆಲ್ ಶಾಸಕ ಶಿವರಾಮ್ ಹೆಬ್ಬಾರ್

11

## ಕಾದು ಕುಳಿತ ಬಿಎಸ್‌ವೈ

ಮೊದಲ ಪುಟದಿಂದ

**ದಿಲ್ಲಿಗೆ ಅಶೋಕ್ ದೌಡು:** ರಾಷ್ಟ್ರೀಯ ನಾಯಕರಿಂದ ಸ್ಪಷ್ಟ ಸಂದೇಶ ಲಭಿಸದ ಹಿನ್ನೆಲೆಯಲ್ಲಿ ತುಸು ವಿಚಲಿತರಾಗಿದ್ದ ಯಡಿಯೂರಪ್ಪ ಅವರು ಮಾಜಿ ಡಿಸಿಎಂ ಆರ್. ಅಶೋಕ್ ಅವರನ್ನು ಬುಧವಾರ ದಿಲ್ಲಿಗೆ ಕಳುಹಿಸಿದ್ದರು. ಸಂಸದೀಯ ಮಂಡಳಿ ಸಭೆ ನಡೆಯುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ನಾಯಕರ 'ಮೂಡ್' [illegible] ಸರಕಾರ ರಚನೆಗೆ ಇರುವ ಕಾನೂನು ತೊಡಕುಗಳು ಜಟಿಲವಾಗಿದ್ದಲ್ಲಿ ಏನು ಮನವರಿಕೆ ಮಾಡಿಕೊಡುವುದು ಅವರ ಉದ್ದೇಶವಾಗಿತ್ತು.

**ಬೆಂಗಳೂರು ಬಿಡದಂತೆ ಸೂಚನೆ:** ಸರಕಾರ ರಚನೆ ಪ್ರಕ್ರಿಯೆ ಆರಂಭವಾಗುವ ಹಿನ್ನೆಲೆಯಲ್ಲಿ ಮುಂದಿನ ಎರಡು ದಿನಗಳ ಕಾಲ ಬೆಂಗಳೂರು ಬಿಟ್ಟು ತೆರಳದಂತೆ ಬಿಜೆಪಿಯ ಎಲ್ಲ ಶಾಸಕರಿಗೆ ಸೂಚನೆ ನೀಡಲಾಗಿದೆ.

---

ಇದುವರೆಗೆ ನಡೆದ ಎಲ್ಲ ಬೆಳವಣಿಗೆಗಳನ್ನು ರಾಷ್ಟ್ರೀಯ ನಾಯಕರ ಗಮನಕ್ಕೆ ತಂದಿದ್ದೇವೆ. ಅವರ ಸಲಹೆಯಂತೆ ಮುಂದಿನ ನಡೆಗಳನ್ನು ನಿರ್ಧರಿಸುತ್ತೇವೆ.

**-ಆರ್. ಅಶೋಕ್**
ಮಾಜಿ ಡಿಸಿಎಂ